## ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಅಫಜಲಪೂರ

## ಸಿಸಿ ನಂ**. 110/2020**

ಚಾಸಾ-7  ಫ್ರಾಸಾ-4

ಸತ್ಯ ಪ್ರತಿಜ್ಞೆಯ ಮೇರೆಗೆ ಪ್ರಮಾಣಿಕೃತ ಹೇಳಿಕೆ
ಪಡೆದುಕೊಳ್ಳಲಾಯಿತು.
ದಿನಾಂಕ: 08-04-2026

| | | |
|---|---|---|
| ಹೆಸರು | : | ಸಿದ್ದಪ್ಪ @ ಸಿದ್ದು |
| ತಂದೆಯ  ಹೆಸರು | : | ಸಂಗಪ್ಪ |
| ವಯಸ್ಸು | : | 35 ವರ್ಷ |
| ಉದ್ಯೋಗ | : | ಒಕ್ಕಲುತನ |
| ವಾಸಸ್ಥಳ | : | ಬಡದಾಳ |

-: ಮುಖ್ಯ ವಿಚಾರಣೆ :- ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ :-

ಚಾಸಾ 1 ನನ್ನ ಮಾವನಾಗಬೇಕು. ಚಾಸಾ 6 ಪರಿಚಯ ಇಲ್ಲ. ಚಾಸಾ 10 ರಿಂದ 12 ರವರು ಪರಿಚಯ ಇಲ್ಲ. ಮೃತ ಬಸವರಾಜ ನನ್ನ ಮಾವನಾಗಬೇಕು.

ಮೃತ ಬಸವರಾಜ ಈತನಿಗೆ ಕರಜಗಿ ಹತ್ತಿರ ರಸ್ತೆ ಅಪಘಾತ ಆಗಿರುತ್ತದೆ. ನಂತರ ಅಫಜಲಪುರ ಸರಕಾರಿ ಆಸ್ಪತ್ರೆಗೆ ತೆಗೆದುಕೊಂಡು ಬಂದು ದಾಖಲು ಮಾಡಿರುತ್ತೇವೆ. ಮೃತ ಬಸವರಾಜ ಮಣೂರು ಕಡೆ ಹೋಗುತ್ತಿರುವಾಗ ಅಡ್ಡಬಂದು ಹಾಯಿಸಿ ಅಪಘಾತ ಆಗಿರುತ್ತದೆ. ಆನಂತರ ಅಪಘಾತಪಡಿಸಿದವರು ನಮಗೆ ಭೇಟಿ ಆಗಿರುವುದಿಲ್ಲ. ಈಗ ಪ್ರಕರಣ ನ್ಯಾಯಾಲಯದಲ್ಲಿ ಚಾಲ್ತಿ ಇರುತ್ತದೆ.

<u>ಪಾಟೀ ಸವಾಲುಃ ಆರೋಪಿ ಪರ ಶ್ರೀ **MSD** ವಕೀಲರಿಂದಃ-</u>

ಮೃತ ನನ್ನ ಮಾವ ಇರುವುದರಿಂದ ನಾನು ಸಾಕ್ಷಿ ಹೇಳಲು ಬಂದಿರುತ್ತೇನೆ ಎಂದರೆ ಸರಿ. ಅಪಘಾತ ಹೇಗೆ ಆಯಿತು ಎಂದು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಅಪಘಾತಪಡಿಸಿದ ಚಾಲಕ ಓಡಿಹೋಗಿರುತ್ತಾನೆ ಎಂದು ನುಡಿಯುತ್ತಾರೆ. ಹೈದ್ರಾ ಕ್ರಾಸ ಬಳಿ ಸಾಕಷ್ಟು ವಾಹನಗಳು ಓಡಾಡುತ್ತವೆ ಎಂದರೆ ಸರಿ. ಅಲ್ಲಿ ರಸ್ತೆ ಸ್ವಲ ಕಚ್ಚಾ ಇರುತ್ತದೆ ಎಂದರೆ ಸರಿ. ಗುನ್ಹೆಸ್ಥಳ ಸುತ್ತಮುತ್ತ ಪೆಟ್ರೋಲ ಪಂಪ ಇರುತ್ತವೆ. ಪೆಟ್ರೋಲ ಪಂಪ ಮುಂದಗಡೆ ಸಾಕಷ್ಟು ಜಾಗ ಇರುತ್ತವೆ ಎಂದರೆ ಸರಿ. ಮೃತ ಬಸವರಾಜ ತಾನಾಗಿಯೆ ಬಿದ್ದು ಅಪಘಾತಪಡಿಸಿಕೊಂಡಿರುತ್ತಾನೆ ಎಂದರೆ ಸರಿಯಲ್ಲ. ವಿಮೆ ಪರಿಹಾರ ಪಡೆಯಲು ಆರೋಪಿ ವಿರುದ್ಧ ಸುಳ್ಳು ದೂರು ನೀಡಿರುತ್ತೇವೆ ಎಂದರೆ ಸರಿಯಲ್ಲ. ಕಚ್ಚಾ ರಸ್ತೆಯಲ್ಲಿ ವೇಗವಾಗಿ ಬರಲು ಸಾಧ್ಯವಿಲ್ಲ ಎಂದರೆ ಸರಿಯಲ್ಲ. ನಾನು ಪೋಲಿಸರ ಮುಂದೆ ಹೇಳಿಕೆ ನೀಡಿಲ್ಲ ಎಂದರೆ ಸರಿ.

<u>ಮರು ವಿಚಾರಣೆಃ - ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ

ಸಿವಿಲ್ & ಪ್ರ.ದ.ನ್ಯಾ. ದಂಡಾಧಿಕಾರಿಗಳು
ಅಫಜಲಪೂರ